# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ–3718/2014/ಡಿಆರ್‌ಇ–5
ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ–3717/2014/ಡಿಆರ್‌ಇ–5
ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ–1778/2016/ಡಿಆರ್‌ಇ–5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ:29.6.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಶ್ರೀ ಮಾದೇಶ ಮತ್ತು ಇಲಿಯಾಸ್ ಪಾಷಾ, ಅಂಜನಾಪುರ, ರಾಮನಗರದ ನಿವಾಸಿಗಳು ಮತ್ತು ಶ್ರೀ ಶ್ರೀನಿವಾಸ, ತಂದೆ ತಿಮ್ಮೆಗೌಡ್ರು, ವಾಸ: ಬಿ.ಎಂ. ರಸ್ತೆ, ರಾಮನಗರ ಇವರು ಸಲ್ಲಿಸಿದ ದೂರಿನ ಕುರಿತು.

****

ಈ ದೂರನ್ನು ಶ್ರೀ ಮಾದೇಶ ಮತ್ತು ಇಲಿಯಾಸ್ ಪಾಷಾ, ಅಂಜನಾಪುರ, ರಾಮನಗರದ ನಿವಾಸಿಗಳು ಮತ್ತು ಶ್ರೀ ಶ್ರೀನಿವಾಸ, ತಂದೆ ತಿಮ್ಮೆಗೌಡ್ರು, ವಾಸ: ಬಿ.ಎಂ. ರಸ್ತೆ, ರಾಮನಗರ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಆಯುಕ್ತರು ನಗರ ಸಭೆ ರಾಮನಗರ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿಯಲ್ಲಿ ತನಿಖೆಗೆ ಕೈಗೆತ್ತಿಕೊಳ್ಳಲಾಯಿತು.

2. ಈ ಮೂರು ಪ್ರಕರಣಗಳಲ್ಲಿನ ವಿಷಯ ವಸ್ತು ಒಂದೇ ಆಗಿರುವುದರಿಂದ ಅವುಗಳನ್ನು ಒಗ್ಗೂಡಿಸಿಕೊಂಡು ಒಂದೇ ರೀತಿಯ ತನಿಖೆಗೆ ತೆಗೆದುಕೊಳ್ಳಲಾಗಿದೆ.

(ಎ) ಮೊದಲನೇ 2 ದೂರುಗಳನ್ನು ಶ್ರೀ ಮಾದೇಶ ಮತ್ತು ಇಲಿಯಾಸ್ ಪಾಷಾ, ಅಂಜನಾಪುರ, ರಾಮನಗರದ ನಿವಾಸಿಗಳು, ಆಯುಕ್ತರು ನಗರ ಸಭೆ ರಾಮನಗರ ಇವರ ವಿರುದ್ಧ ಸಲ್ಲಿಸಿದ್ದಾರೆ.

3. **ದೂರಿನ ಸಂಕ್ಷಿಪ್ತ ವಿವರ:**

ದೂರುದಾರರು ತಮ್ಮ ದೂರಿನಲ್ಲಿ ರಾಮನಗರ ನಗರ ಸಭೆಯಲ್ಲಿ ನಿರಾಶ್ರಿತರಿಗೆ ಆಶ್ರಯ ಯೋಜನೆಯ ಅಡಿಯಲ್ಲಿ ಸೈಟುಗಳನ್ನು ಹಂಚಿಕೆ ಮಾಡುವ ಬದಲು ನಗರ ಸಭೆಯ



17

ಸದಸ್ಯರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಆರ್ಥಿಕವಾಗಿ ಸದೃಢವಾಗಿರುವವರಿಗೆ ಕೊಟ್ಟು ಕರ್ತವ್ಯಲೋಪ ಎಸಗಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

4. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

5. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನಲ್ಲಿರುವ ಅಂಶಗಳನ್ನು ಅಲ್ಲಗಳೆದಿದ್ದು, ನಿವೇಶನಗಳನ್ನು ಹಂಚಿಕೆ ಮಾಡುವಾಗ ಸರ್ಕಾರದ ನಿಬಂಧನೆಗಳನ್ನು ಪಾಲಿಸಲಾಗಿದೆ, ಯಾವುದೇ ರೀತಿಯ ಹಣ ದುರುಪಯೋಗವಾಗಿಲ್ಲ ಅಂತ ತಿಳಿಸಿದ್ದು, ಎದುರುದಾರರ ಆಕ್ಷೇಪಣೆಯು ಕೇವಲ ತಮ್ಮ ಅಧೀನ ಅಧಿಕಾರಿಗಳ ಜಂಟಿ ವರದಿಯ ಮೇಲೆ ಅವಲಂಬಿತವಾಗಿತ್ತು ಮತ್ತು ಅದು ಸಹಃ ಪೂರ್ಣ ಮಾಹಿತಿಯಿಂದ ಕೂಡಿರಲಿಲ್ಲ. ಆದ್ದರಿಂದ ನಿರ್ದಿಷ್ಟವಾದ ಆಕ್ಷೇಪಣೆಯನ್ನು ಸಲ್ಲಿಸಲು ಎದುರುದಾರರಿಗೆ ಸೂಚಿಸಲಾಗಿದೆ.

6. ಎದುರುದಾರರು ಪುನಃ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಅದರಲ್ಲಿ ಸೈಟುಗಳ ಹಂಚಿಕೆಯನ್ನು ಆಶ್ರಯ ಯೋಜನೆಯಡಿಯಲ್ಲಿ ಶ್ರೀಮತಿ ಬಿ.ಸಿ. ಪಾರ್ವತಮ್ಮ ಪುರಸಭಾ ಸದಸ್ಯರು ತಮ್ಮದೇ ಕುಟುಂಬದ 6 ಜನರಿಗೆ ನಗರಸಭೆಯಿಂದ ಸೈಟುಗಳನ್ನು ಪಡೆದಿದ್ದಾರೆ ಎನ್ನುವ ಬಗ್ಗೆ ತನಿಖೆ ಮಾಡಿದಾಗ, ಸದರಿ ಶ್ರೀಮತಿ ಬಿ.ಸಿ. ಪಾರ್ವತಮ್ಮ ಇವರ ಗಂಡ ಮತ್ತು ಮಗನಿಗೆ, ಹಾಗೂ ತನ್ನ ಅಣ್ಣ, ಅಣ್ಣನ ಹೆಂಡತಿ ಮತ್ತು ಅಣ್ಣನ ಮಗನಿಗೆ ಹೀಗೆ ಒಟ್ಟು 6 ನಿವೇಶನಗಳನ್ನು ಹಂಚಿಕೆ ಮಾಡಿದ್ದು ಆಶ್ರಯ ಆಯ್ಕೆಯ ಸಮಿತಿಯಿಂದ ಅವರಿಗೆ ನೇರವಾಗಿ ಯಾವುದೇ ನಿವೇಶನ ಹಂಚಿಕೆ ಆಗಿಲ್ಲ. ಸದರಿ ಪುರಸಭಾ ಸದಸ್ಯರ ಗಂಡ ಮತ್ತು ಅಣ್ಣನ ಕುಟುಂಬಕ್ಕೆ ಯಾವುದೇ ನಿವೇಶನಗಳು ಇರಲಿಲ್ಲ. ಆದ್ದರಿಂದ ಅವರಿಗೆ ಕೊಟ್ಟಿರುವ ನಿವೇಶನಗಳು ಸರಿಯಾಗಿವೆ ಆದರೆ, ಶ್ರೀಮತಿ ಬಿ.ಸಿ.ಪಾರ್ವತಮ್ಮ ಇವರ ಮಗ ದೇವರಾಜು ಅಪ್ರಾಪ್ತ ವಯಸ್ಕರಾಗಿದ್ದು, ಅವರ ಅಣ್ಣನ ಕುಟುಂಬಕ್ಕೆ 3 ನಿವೇಶನಗಳನ್ನು ಕೊಡಿಸುವ ಮೂಲಕ ಕರ್ತವ್ಯಲೋಪ ಎಸಗಿದ್ದಾರೆ. ಈ ಬಗ್ಗೆ ಸಂಬಂಧಪಟ್ಟವರಿಗೆ ತಿಳುವಳಿಕೆ ಪತ್ರ ನೀಡಿ ಸಮಜಾಯಿಸಿ ಪಡೆದು ಸೂತ್ತೋಲೆಗಳ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು ಅಂತ ದಿ: 25-02-2015 ರಂದು ವರದಿ ಸಲ್ಲಿಸಿದ್ದಾರೆ. ಇದಾದ ನಂತರ ಅನುಪಾಲನಾ ವರದಿ ಕೇಳಲಾಗಿ, ಈ ಪ್ರಕರಣಗಳ ದೂರುದಾರರು ತಾವು ದೂರನ್ನು ಹಿಂಪಡೆಯುತ್ತಿರುವುದಾಗಿ ಹೇಳಿದ್ದಾರೆ. ಆದ್ದರಿಂದ ದೂರನ್ನು ಮುಕ್ತಯಗೊಳಿಸಬೇಕೆಂದು ಕೋರಿಕೊಂಡಿದ್ದಾರೆ.

7. ಆ ಹಂತದಲ್ಲಿ ಶ್ರೀ ಶ್ರೀನಿವಾಸ, ಬಿ.ಎಂ. ರಸ್ತೆ, ರಾಮನಗರದ ನಿವಾಸಿ ಇವರು ಕಂಪ್ಲೇಂಟ್/ಉಪಲೋಕ್/ಬಿ.ಡಿ.1778/2016 ರಲ್ಲಿ ದೂರನ್ನು ಸಲ್ಲಿಸಿ, ಸದರಿ ಇಬ್ಬರು ದೂರುದಾರರಿಗೆ ಬೆದರಿಕೆ ಹಾಕಲಾಗಿದೆ ಅಥವಾ ಆಮಿಷ ಒಡ್ಡಲಾಗಿದೆ. ಆದ್ದರಿಂದ ಸಮಕ್ಷಮ ಹಾಜರುಪಡಸಿಕೊಳ್ಳುವಂತೆ ಕೋರಿ ಪ್ರಕರಣವನ್ನು ಮುಂದುವರೆಸುವಂತೆ ಕೋರಿಕೊಂಡಿದ್ದಾರೆ.

8. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಶ್ರೀಮತಿ ಬಿ.ಸಿ. ಪಾರ್ವತಮ್ಮ ಎನ್ನುವ ಪುರಸಭಾ ಸದಸ್ಯರು 1992-93 ರಿಂದ 1999 ಅವಧಿಯಲ್ಲಿ ತನ್ನ ಗಂಡ, ಅಪ್ರಾಪ್ತ ವಯಸ್ಸಿನ ಮಗ, ತನ್ನ ಅಣ್ಣ, ಅಣ್ಣನ ಹೆಂಡತಿ ಮತ್ತು ಮಗ ಇವರಿಗೆಲ್ಲಾ 5 ನಿವೇಶನಗಳನ್ನು ಆಶ್ರಯ ಯೋಜನೆಯ ಅಡಿಯಲ್ಲಿ ಹಂಚಿಕೆ ಮಾಡಿರುವುದು ಕಂಡಬಂದ ನಂತರ ಎದುರುದಾರರು ಕೇವಲ ನೋಟಿಸ್‌ಗಳನ್ನು ಕೊಟ್ಟು ನಂತರ ಇಬ್ಬರು ದೂರುದಾರರು ಪ್ರಕರಣವನ್ನು ಹಿಂದಕ್ಕೆ ಪಡೆಯುತ್ತಿದ್ದಾರೆ ಎನ್ನುವ ಕಾರಣಕ್ಕೆ ಪ್ರಕರಣಗಳನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ. ಒಂದು ಸಲ ತನಿಖೆಯು ಪ್ರಾರಂಭವಾದ ನಂತರ ಆಪಾದನೆಗಳು ಸಾಬೀತಾಗಿದ್ದಲ್ಲಿ ಒಂದು ಜವಾಬ್ದಾರಿಯುತ ಸಂಸ್ಥೆಯಾಗಿ ದೂರುಗಳನ್ನು ವಾಪಸ್ಸು ಪಡೆಯಲು ಅನುಮತಿಸಿದರೆ, ದೂರುದಾರರು ಆಮಿಷ ಅಥವಾ ಪ್ರಭಾವಕ್ಕೆ ಒಳಗಾಗಬಹುದಾಗಿದೆ. ಇದಲ್ಲದೇ ಇನ್ನೊಬ್ಬ ದೂರುದಾರರಾದ ಶ್ರೀ ಶ್ರೀನಿವಾಸ್ ರವರು ಪ್ರಕರಣವನ್ನು ಮುಂದುವರೆಸಲು ಬಯಸುತ್ತಿದ್ದಾರೆ. ಆದ್ದರಿಂದ, ಸೂಕ್ತ ಕಾನೂನಿನ ಕ್ರಮ ತೆಗೆದುಕೊಳ್ಳಲು ಎದುರುದಾರರಿಗೆ ನಿರ್ದೇಶನ ಕೊಡಬಹುದಾಗಿದೆ.

9. ಎದುರುದಾರರು ಸಲ್ಲಿಸಿರುವ ವರದಿಯ ಪ್ರಕಾರ 1992, 1994 ಮತ್ತು 1998 ರಲ್ಲಿ ನಿವೇಶನ ಹಂಚಿಕೆಗಳನ್ನು ಮಾಡಿದ ಅವಧಿಯಲ್ಲಿ ಶ್ರೀ ನಾ.ರೇಣುಕ ಮತ್ತು ಶ್ರೀ ಶಿವಣ್ಣ ಇವರು ಪುರಸಭೆಯ ರಾಮನಗರದ ಮುಖ್ಯಾಧಿಕಾರಿಗಳು ಮತ್ತು ನಗರ ಸಭೆಯ ಪೌರಾಯುಕ್ತರಾಗಿ ಹಾಗೂ ಆಶ್ರಯ ಸಮಿತಿ ಸದಸ್ಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಯಾವುದೇ ದೂರನ್ನು ತನಿಖೆ ನಡೆಸಿದ ತರುವಾಯ ಅಂತಹ ಕ್ರಮವು ಫಿರ್ಯಾದಿಗೆ ಅಥವಾ ಇತರೆ ವ್ಯಕ್ತಿಗೆ ಅನ್ಯಾಯ ಅಥವಾ ಅನುಚಿತ ತೊಂದರೆಯನ್ನು ಉಂಟು ಮಾಡಿದೆ ಎಂದು ಉಪಲೋಕಾಯುಕ್ತರಿಗೆ ಮನದಟ್ಟವಾದರೆ ಒಂದು ಲಿಖಿತ ವರದಿಯ ಮೂಲಕ ಅಂತಹ ಅನ್ಯಾಯವನ್ನು ನಿವಾರಿಸತಕ್ಕದ್ದು ಅಥವಾ ಪರಿಹರಿಸತಕ್ಕದ್ದು ಅಂತ ಸಕ್ಷಮ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಬಹುದಾಗಿದೆ. ಆದ್ದರಿಂದ ಎದುರದಾರರ ಶಿಸ್ತುಪ್ರಾಧಿಕಾರಕ್ಕೆ ಶಿಫಾರಸ್ಸನ್ನು ಕಳುಹಿಸಿ ಶ್ರೀಮತಿ ಬಿ.ಸಿ. ಪಾರ್ವತಮ್ಮ ಇವರ ಕುಟುಂಬ ಸದಸ್ಯರಿಗೆ ಆಶ್ರಯಯೋಜನೆ



18

ಅಡಿಯಲ್ಲಿ ಹಂಚಿಕೆಯಾಗಿರುವ ನಿವೇಶನಗಳನ್ನು ವಾಪಸ್ಸು ಪಡೆದುಕೊಳ್ಳಲು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

29/6/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.